# ಬೆಳಕಿನ ನೆರಳು

## ಮಹಾತ್ಮ ಮತ್ತು ಹರಿಲಾಲ್


■ ಮೂಲ: **ದಿನಕರ್ ಜೋಶಿ**

■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**

ಕಲೆ: ಮನೋಹರ ಆಚಾರ್ಯ


## ಬಾಪೂಗೆ ಪತ್ರ ಬರೆದ ಹರಿಲಾಲ

ಹರಿಲಾಲ ಇನ್ನೊಂದು ಪತ್ರವನ್ನು ಬಾ ಅವರಿಗೆ ಪ್ರತ್ಯೇಕವಾಗಿ ಬರೆದ. ಆ ಪತ್ರದಲ್ಲಿ ಹೊಸದಾಗಿ ಬರುವ ಎಳೆಯ ಅತಿಥಿಯ ಬಗ್ಗೆಯೂ ಸೂಚನೆಯನ್ನು ಕೊಟ್ಟ, ಅಲ್ಲದೆ ತಾನು ಆಫ್ರಿಕಾಕ್ಕೆ ಬರುವ ತನ್ನಿಚ್ಛೆಯ ಬಗ್ಗೆಯೂ ವಿಸ್ತಾರವಾಗಿ ಬರೆದ.

ಪತ್ರವನ್ನು ಬರೆದ ನಂತರ ಹರಿಲಾಲ ಭಾರವನ್ನು ಮನಗಂಡ. ಆದರೆ ಗುಲಾಬ ನಿಶ್ಚಿಂತಳಾದಳು. ಇನ್ನು ಕೆಲವೇ ದಿನಗಳಲ್ಲಿ ಆಫ್ರಿಕಾಕ್ಕೆ ಹೋಗಬಹುದು ಎಂಬ ಉತ್ಸಾಹದಲ್ಲಿ ತನ್ನನ್ನು ಕೆಲಸದಲ್ಲಿ ತೊಡಗಿಸಿಕೊಂಡಳು. ಹರಿಲಾಲ ಹೆಂಡತಿಯ ಆಗ್ರಹ ಮತ್ತು ಪರಿಸ್ಥಿತಿಗಳ ಒತ್ತಡಕ್ಕೆ ಒಳಗಾಗಿ ಪತ್ರವನ್ನಂತೂ ಬರೆದಿದ್ದ, ಆದರೆ ಈಗಲೂ ಸಹ ಅವನ ಮನಸ್ಸು ತುಂಬಾ ವ್ಯಗ್ರಗೊಂಡಿತ್ತು. ಬಾಪೂ ಅವರ ಬಳಿಗೆ ಮರಳಿ ಹೋಗುವುದೆಂದರೆ, ತನ್ನ ಸೋಲನ್ನು ಒಪ್ಪಿಕೊಂಡಂತಾಗುವುದು. ಬ್ಯಾರಿಸ್ಟರ್ ಆಗಲು ಬಾಪೂ ತನ್ನನ್ನು ಆಯ್ಕೆ ಮಾಡಿರಲಿಲ್ಲ ಎಂಬ ಯಥಾರ್ಥವೇ ಇದಕ್ಕೆ ಸ್ಪಷ್ಟ ನಿದರ್ಶನವಾಗಿತ್ತು. ಚಿಟಿಕೆ ಸಕ್ಕರೆಗಾಗಿ ಬಾ ಅವರ ವಿರುದ್ಧ ದ್ವೇಷ ಕಾರಿದ ಆ ಗರ್ವಿಷ್ಠ ಜನರ ದೃಷ್ಟಿಯಲ್ಲಿ ಬಾ ಅವರು ತಮಾಷೆಯ ವಸ್ತುವಾಗಿದ್ದು ಈಗಲೂ ಚುಚ್ಚುತ್ತಿತ್ತು. ಕ್ಯಾಲನ್ ಬೈಕ್, ಪೋಲಕ್, ಜೋಸೆಫ್, ರಾಯಪ್ಪೆನ್, ನಾಯಡೂ, ಸೋರಾಬಜಿ, ರಿಚ್‌ರಂಥ ಶಿಕ್ಷಿತ ಮತ್ತು ಬುದ್ಧಿವಂತ ಜನರ ನಡುವೆ ಅಶಿಕ್ಷಿತನಾದ ತಾನು ಹೇಗಿರಲು ಸಾಧ್ಯ ಎಂಬುದಕ್ಕೆ ಸಮಾಧಾನವನ್ನು ಹರಿಲಾಲನಿಂದ ಹುಡುಕಲಾಗುತ್ತಿರಲಿಲ್ಲ.

ಆದರೆ ಬಾಪೂ ಅವರಿಗೆ ಅವನು ಬರೆದ ಪತ್ರಕ್ಕೆ ಉತ್ತರ ಬರುವುದಕ್ಕೂ ಮೊದಲೇ ಟಾಲ್‌ಸ್ಟಾಯ್ ಫಾರ್ಮ್‌ನಿಂದ ಸುದ್ದಿಯೊಂದು ಬಂತು, ಈ ಸುದ್ದಿಯಿಂದಾಗಿ ಅವನು ತತ್ತರಿಸಿದ, ಅವನ ಮನಸ್ಸಿನಲ್ಲಿ ಹಾಹಾಕಾರವೆದ್ದಿತು.

***

ಟಾಲ್‌ಸ್ಟಾಯ್ ಫಾರ್ಮ್‌ನಲ್ಲಿರುವ ಎಲ್ಲರೂ ಒಂದೇ ಪರಿವಾರದ ಸದಸ್ಯರಂತಿರಬೇಕು, ಅವರಲ್ಲಿ ಪರಸ್ಪರ ಪ್ರೀತಿ ಇರಬೇಕೆಂದು ಯೋಚಿಸಿದ್ದ ಗಾಂಧೀಜಿ ಅದಕ್ಕೆ ಯೋಗ್ಯ ವ್ಯವಸ್ಥೆಯನ್ನು ಸಹ ಮಾಡಿದ್ದರು. ಸತ್ಯಾಗ್ರಹದ ಸಾಮಾನ್ಯ ಕೊಂಡಿಯೊಂದಿಗೆ ಕೂಡಿ ಕೊಂಡಿದ್ದ ಆಶ್ರಮವಾಸಿಗಳಲ್ಲಿ ನಾವೆಲ್ಲರೂ ಒಂದೇ ಪರಿವಾರದವರು ಎಂಬ ಭಾವನೆ ಸದಾ ಇರದಿದ್ದರೆ, ಸತ್ಯಾಗ್ರಹದ ಮೂಲಕ ದೇಶದ ಸಾಮೂಹಿಕ ಜೀವನದ ಕನಸೆಂದೂ ಪೂರ್ಣವಾಗದು ಎಂಬುದು ಗಾಂಧೀಜಿಯವರಿಗೆ ತಿಳಿದಿತ್ತು. ಅದಕ್ಕಾಗಿಯೇ ಆಶ್ರಮವಾಸಿಗಳಿಗೆ ಒಂದೇ ಅಡುಗೆ ಮನೆ, ಸರಳ ಆಹಾರ ಮತ್ತು ಸಾಮಾನ್ಯ ನಡೆನುಡಿ ಆಚರಣೆಗಳ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿತ್ತು. ಎಲ್ಲರಿಗೂ ಒಂದೇ ವಿಧದ ಪರಿಶ್ರಮ, ಒಂದೇ ನಿಯಮವಿದ್ದು ಪರಿವಾರಭಾವನೆ ಹೆಚ್ಚುತ್ತಿರಬೇಕೆಂಬ ಉದ್ದೇಶದಿಂದ, ವಾಸಿಸುವ ಕೊಠಡಿಗಳಲ್ಲಿ ಪರಸ್ಪರ ಅದಲುಬದಲು ಮಾಡಿಕೊಳ್ಳುವಂಥ ವ್ಯವಸ್ಥೆ ಸಹ ಇದ್ದವು. ಎಲ್ಲರ ಹಾಸಿಗೆಗಳನ್ನು ಸಹ ತೆರೆದ ಜಾಗದಲ್ಲಿ ಒಟ್ಟಿಗೆ ಹಾಕಲಾಗುತ್ತಿತ್ತು.

ಆದರೆ ದೊಡ್ಡವರ ಹೋಲಿಕೆಯಲ್ಲಿ, ಆಶ್ರಮದ ಮಕ್ಕಳ ನಡುವೆ ಒಂದೇ ಪರಿವಾರದ ಸಹೋದರ ಸಹೋದರಿಯರು ಎಂಬ ಸ್ವಚ್ಛ ಪ್ರೀತಿಯ ಭಾವನೆ ಇರಬೇಕು; ಇದು ಆರಂಭದಲ್ಲಿಯೇ ವಿಕಾಸಗೊಳ್ಳಬೇಕೆಂಬ ದೃಷ್ಟಿಯಿಂದ ವಿಶೇಷವಾದ ಪ್ರಯತ್ನವನ್ನು ಮಾಡಬೇಕಾದ ಅಗತ್ಯವಿತ್ತು. ದೊಡ್ಡವರಿಗೆ ಬೌದ್ಧಿಕ ತರ್ಕ ಅಥವಾ ವ್ಯವಹಾರದ ಮುಖಾಂತರ ತಿಳಿವಳಿಕೆ ಹೇಳಬಹುದಿತ್ತು, ಆದರೆ ಆಶ್ರಮದಲ್ಲಿರುವ ತಿಳಿವಳಿಕಸ್ತ ಮತ್ತು ತಿಳಿವಳಿಕೆಯಿಲ್ಲದ ಬಾಲಕರಿಗೆ ವಿಕಾಸದ ಆರಂಭದ ಶಿಕ್ಷಣವನ್ನು ಕೊಟ್ಟರೆ, ಈ ಕೆಲಸ ಸಹಜವಾಗಿ ನೆರವೇರುತ್ತದೆ ಎಂಬ ವಿಚಾರದಿಂದ ಬಾಪೂ ಅವರು ಎಲ್ಲಾ ಕಿಶೋರಕಿಶೋರಿಯರ ಸ್ನಾನಕ್ಕೆ ಆಶ್ರಮದ ಪರಿಧಿಯೊಳಗೇ, ಆದರೆ ದಟ್ಟ ವೃಕ್ಷಗಳು ಇತ್ಯಾದಿಗಳಿಂದ ಆವರಿಸಿದ, ಸ್ವಲ್ಪವೇ